# ಚುರುಕು ಮುಟ್ಟಿಸುವ ಹಾಲುವಾಣ


**ಘರ್ಷಣೆಯಿಂದ ಬಿಸಿಯಾಗುವ ಗುಣದ 'ಪಾರಿವಾಳ ಬೀಜ'ದ ನೆನಪು ಹಲವರ ಬಾಲ್ಯದಲ್ಲಿ ಬೆಚ್ಚಗಿದೆ. ಈ ಬೀಜದ 'ಹಾಲುವಾಣ' ಮರ ಮುಂದಿನ ಪೀಳಿಗೆಗೂ ದಕ್ಕಬೇಕಿದೆ.**

■ ವಿನು ಗಂಗೆ



ನಾವು ಆಗ ಚಿತ್ರದುರ್ಗದಲ್ಲಿದ್ದೆವು. ನನಗೆ ಸುಮಾರು ಏಳೆಂಟು ವರ್ಷ. 'ನಾಗರಹಾವು' ಸಿನಿಮಾ ಬಿಡುಗಡೆ ಆಗಿ ಸುಮಾರು ವರ್ಷಗಳೇ ಕಳೆದಿದ್ದರೂ ಅದರ ಪ್ರಭಾವ ಇನ್ನೂ ಹಾಗೇ ಇತ್ತು. ತ.ರಾ.ಸು. ಸೃಷ್ಟಿಸಿ, ಪುಟ್ಟಣ್ಣ ನಿರ್ದೇಶಿಸಿ, ವಿಷ್ಣುವರ್ಧನ್ ಜೀವ ತುಂಬಿದ ರಾಮಾಚಾರಿ ಎಂಬ ಹೆಸರು ಈಗಲೂ ದೃಶ್ಯ ಮಾಧ್ಯಮದ ಟ್ರಂಪ್ ಕಾರ್ಡ್ ಆಗಿರುವುದರಿಂದ, ಆ ಸಿನಿಮಾದ ಗಾಳಿ ಈಗಲೂ ಪ್ರಬಲವಾಗಿದೆ ಎಂದರೆ ಸುಳ್ಳಲ್ಲ.

ನಮ್ಮ ಪಕ್ಕದ ಮನೆಯಲ್ಲಿದ್ದ ಶಶಿ ಎಂಬ ಹುಡುಗನಿಗೆ ಈ ಗಾಳಿ ಎಷ್ಟು ತಗುಲಿತ್ತೆಂದರೆ ಅವನು ತಾನೇ ರಾಮಾಚಾರಿ ಎಂದುಕೊಂಡು ಆಗಾಗ 'ಈ ದುರ್ಗದ ಹುಲಿ ಇವನು ಹಹ್ಹಹಃ' ಎಂದು ರೋಷ ಆವಾಹಿಸಿಕೊಳ್ಳುತ್ತಿದ್ದ. ನಾನು ಹಿಂದೆ ಹೇಳಿದ ಕಣಗಲು ಮರದ ಕಥೆಯಲ್ಲಿ ಸಗಣಿ ಆಯಲು ನನ್ನೊಡನೆ ಪೈಪೋಟಿಗಿಳಿಯುತ್ತಿದ್ದವರಲ್ಲಿ ಇವನೂ ಒಬ್ಬ. ಆಗೆಲ್ಲಾ ನಾವು ಕಿಟಕಿಗೆ ಬೆಡ್‌ಶೀಟ್ ಕಟ್ಟಿ ಬಾಗಿಲು ಮುಚ್ಚಿ, ಕೋಣೆ ಕತ್ತಲು ಮಾಡಿ, ಭೂತಗಾಜು, ಕನ್ನಡಿ, '**negatives**'ಗಳಿಂದ ಮನೆ ಒಳಗೋಡೆ ಮೇಲೆ ಸೂರ್ಯನ ಬೆಳಕಿನ ಪ್ರತಿಫಲನದಿಂದ ದೊಡ್ಡ ಬಿಂಬ ಮೂಡಿಸಿ 'ಸಿನಿಮಾ ಆಟ' ಅಂತ ಆಡುತ್ತಿದ್ದೆವು. ಇತರ ಆಟಗಳಂತಲ್ಲದೆ ಈ ಆಟಕ್ಕೆ ಹೆಚ್ಚಿನ ಕೌಶಲ ಬೇಕು. ಹಾಗಾಗಿ ನಮ್ಮ ರಸ್ತೆಯಲ್ಲಿ ಸಿನಿಮಾ ಬಿಡುತ್ತಿದ್ದವರೆಂದರೆ ನಾನು, ಶಶಿ ಇಬ್ಬರೇ. ಯಾರ ಸಿನಿಮಾ ಪ್ರೇಕ್ಷಕರನ್ನು (ರಸ್ತೆಯ ಇತರ ಮಕ್ಕಳು) ಹೆಚ್ಚು ಸೆಳೆಯುವುದೋ ಎಂಬ ಅಘೋಷಿತ ಪೈಪೋಟಿ ನಮ್ಮಿಬ್ಬರ ನಡುವೆ ಇತ್ತು. ಹೆಚ್ಚು ಕತ್ತಲು, ಒಳ್ಳೆಯ ಕಾರ್ಟೂನ್ ನೆಗೆಟಿವ್ ಇದ್ದಲ್ಲಿ ಪ್ರೇಕ್ಷಕರನ್ನು ಆಕರ್ಷಿಸಬಹುದಿತ್ತು.



ಒಂದು ಸಲ ನನಗೆ ಸಿಕ್ಕ ನೆಗೆಟಿವ್ ಚೆನ್ನಾಗಿ ಇದ್ದುದರಿಂದಲೋ ಏನೋ ಪ್ರೇಕ್ಷಕರು ನನ್ನ ಸಿನಿಮಾ ನೋಡಲು ಬಂದರೇ ವಿನಃ ಶಶಿಯ ಸಿನಿಮಾ ನೋಡಲು ಹೋಗಲಿಲ್ಲ. ಅವನೂ ನನ್ನ ಸಿನಿಮಾ ನೋಡಲು ಬರಲಿಲ್ಲ. ಸಿನಿಮಾ ಮುಗಿದ ಮೇಲೆ ನನ್ನನ್ನು ನೋಡಿ 'ಹಾವಿನ ದ್ವೇಷ ಹನ್ನೆರಡು ವರುಷ ನನ್ನ ರೋಷ ನೂರು ವರುಷ, ಹ್ಹಾ!' ಎಂದು ನನ್ನ ಮುಂದೆ ಆರ್ಭಟ ರಾಗದಲ್ಲಿ ಹಾಡಿಕೊಂಡು ಹೋದ. ನಾನೇನು ತಲೆ ಕೆಡಿಸಿಕೊಳ್ಳಲಿಲ್ಲ. ಮಾರನೇ ದಿನ ಮಣ್ಣಾಡುತ್ತಾ